

### ಆದೇ ಸವಾಲು

ಪರೀಕ್ಷಕರು: ಈ ಪಕ್ಷಿಯ ಕಾಲುಗಳನ್ನಷ್ಟೇ ಗಮನಿಸಿ ಇದರ ಹೆಸರು ಹೇಳು.

ಸಂತಾ: ನನಗೆ ಗೊತ್ತಿಲ್ಲ.

ಪರೀಕ್ಷಕರು: ಹಾಗಾದರೆ ನೀನು ಫೇಲು... ನಿನ್ನ ಹೆಸರೇನು?

ಸಂತಾ: ನನ್ನ ಕಾಲುಗಳನ್ನು ನೋಡಿ ನೀವು ನನ್ನ ಹೆಸರು ಹೇಳಿ ನೋಡುವಾ...?

★★★

### ಓಟ

ಅಥ್ಲೇಟ್ ಗೋಪಿಯ ಮನೆಗೆ ಕಳ್ಳ ನುಗ್ಗಿದ. ಗೋಪಿ ಅವನನ್ನು ನೋಡಿದಾಕ್ಷಣ ಅವನು ಓಡಲಾರಂಭಿಸಿದ.

ಗೋಪಿಯೂ ಹಿಂಬಾಲಿಸಿ ಓಡುತ್ತಾ ಒಂದು ಹಂತದಲ್ಲಿ ಅವನನ್ನು ಹಿಂದಿಕ್ಕಿ ಮುಂದೆ ಸಾಗುತ್ತಾ ಹೇಳಿದ

'ಮೊದಲೇ ಕಳ್ಳ, ಮೇಲಾಗಿ ನಂಜೊತೆನೇ ರೇಸಾ...?

★★★

### ಅಪರಾಧ

ನ್ಯಾಯಾಧೀಶರು: ನಿನ್ನನ್ನೇಕೆ ಸೆರೆ ಹಿಡಿದಿದ್ದಾರೆ?

ಕಳ್ಳ: ಗೊತ್ತಿಲ್ಲ ಮೈ ಲಾರ್ಡ್, ಬೆಳಗಾಗೆದ್ದು ನಾನು ಶಾಪಿಂಗ್ ಮಾಡುತ್ತಿದ್ದಾಗ ಈ ನಾನ್ಸ್‌ಟೇಬಲ್ ನನ್ನನ್ನು ಬಂಧಿಸಿ ಇಲ್ಲಿ ಕರೆ ತಂದರು!

ನ್ಯಾಯಾಧೀಶರು: ಹೌದೆ, ಶಾಪಿಂಗ್ ಮಾಡುವುದು ಅಪರಾಧ ಅಲ್ಲವಲ್ಲಾ...?

ಕಳ್ಳ: ಹೌದು ಸ್ವಾಮಿ, ಅಷ್ಟೊತ್ತಿನಿಂದ ನಾನೂ ಅದನ್ನೇ ಅವರಿಗೆ ಹೇಳಲು ಯತ್ನಿಸುತ್ತಿದ್ದೆ, ಅವರು ನನ್ನ ಒಂದು ಮಾತನ್ನೂ ಕೇಳುತ್ತಿಲ್ಲ...

ನ್ಯಾಯಾಧೀಶರು: ನೀನು ಬೆಳಗ್ಗೆ ಎಷ್ಟು ಗಂಟೆಗೆ ಶಾಪಿಂಗ್ ಮಾಡುತ್ತಿದ್ದೆ?

ಕಳ್ಳ: ಅಂಗಡಿ ಬಾಗಿಲು ತೆರೆಯುವ ಮೊದಲು ಮೈ ಲಾರ್ಡ್!

★★★

### ಸಾಲದ ಸಮಯ

ಇಬ್ಬರು ಮಹಿಳೆಯರಿಗೆ 10 ವರ್ಷಗಳ ಜೈಲು ಶಿಕ್ಷೆಯಾಯಿತು.

10 ವರ್ಷಗಳ ಬಳಿಕ ಇಬ್ಬರಿಗೂ ಬಿಡುಗಡೆಯಾಗಿ ಜೈಲಿನಿಂದ ಹೊರ ಬಂದ ನಂತರ ಪರಸ್ಪರ ಮುಖ ನೋಡಿ ಮುಗುಳ್ನಗುತ್ತಾ, 'ಸರಿ, ಬಾಕಿ ವಿಷಯ ಮನೆಗೆ ಹೋದ ನಂತರ ಮಾತಾಡೋಣ' ಎನ್ನುತ್ತಾ ಬೀಳ್ಕೊಂಡರು!

(ಸಂ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ

ಮೂರ್ತಿ: ಏಕೆ ಕಾರು ಚಕ್ರಗಳನ್ನು ತೆಗೆಯುತ್ತಿದ್ದಿಯಾ?

ಕೀರ್ತಿ: ಬೋರ್ಡ್‌ನಲ್ಲಿ ದ್ವಿಚಕ್ರ ವಾಹನಗಳಿಗೆ ಮಾತ್ರ ಪಾರ್ಕಿಂಗ್ ಅಂತ ಇದೆ ಸಾರ್, ಅದಕ್ಕಾಗಿ.


★★★

ಹೆಂಡತಿ: ಒಂದು ದಿನಕ್ಕೆ 48 ಗಂಟೆಗಳು ಇದ್ದಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು ಅಲ್ಲವೇನ್ರೀ?

ಗಂಡ: ಏಕೆ? ಸಮಯ ಯಾವುದಕ್ಕೆ ಸರಿ ಹೋಗುತ್ತಿಲ್ಲ?

ಹೆಂಡತಿ: ಧಾರಾವಾಹಿಗಳಿಗೆ, ಅರ್ಧ ಗಂಟೆ ಮಾತ್ರ ಬರುತ್ತದೆ!

★★★



ಆತ: ಪ್ರತಿ ದಿನ ಮನೆಗೆಲಸ, ಬಟ್ಟೆ ಒಗೆಯುವುದು, ಅಡಿಗೆ ಕೆಲಸಗಳನ್ನು ಮಾಡಿ ಆಯಾಸ ಆಗಿಬಿಟ್ಟಿದೆ.

ಅದಕ್ಕಾಗಿ ಮದುವೆ ಆಗಲು ನಿರ್ಧಾರ ಮಾಡಿಬಿಟ್ಟೆ!

ಈತ: ಆ ಕೆಲಸಗಳೆಲ್ಲಾ ಮಾಡಿ ಮಾಡಿ ಸುಸ್ತಾಗಿ ನಾನು ಡೈವೋರ್ಸ್ ತೆಗೆದುಕೊಂಡು ಬಿಟ್ಟೆ!

(ಸಂ)ಕೋ.ಲ. ರಂಗನಾಥರಾವ್,
ಬೆಂಗಳೂರು

### ಹೊಟ್ಟೆಯ ಮೇಲೆ ಒದ್ದದ್ದೇಕೆ?

ಮೇಷ್ಟ್ರು: ಅವನ ಹೊಟ್ಟೆಯ ಮೇಲೆ ಏಕೋ ಒದ್ದೆ... ಕತ್ತೆಬಡವನನ್ನು ತಂದು.

ಗುಂಡ: ಅವಂದೇ ತಪ್ಪು ಸರ್; ಅವನು ಸಡನ್ನಾಗಿ (Sudden) ತಿರುಕ್ಕೋಬಿಟ್ಟ.

(ಸಂ) ಕೆ. ಜಯಮ್ಮ, ಮಂಡ್ಯ

★★★

ಗುಂಡ: ಯಾರಾದರೂ ಶ್ರೀಮಂತರ ಮನೆಯ ಹುಡುಗಿಯನ್ನು ಮದುವೆಯಾದರೆ ನನ್ನ ತಾಪತ್ರಯಗಳೆಲ್ಲ ಬಗೆಹರಿಯಬಹುದು.

ಮಿತ್ರ: ಮತ್ತಿನ್ನೇಕೆ ತಡ? ಮದುವೆ ಆಗಿಬಿಡು.

ಗುಂಡ: ಆಗಬಹುದಾಗಿತ್ತು. ಆದರೆ ಅದಕ್ಕೆ ನನ್ನ ಹೆಂಡತಿ ಒಪ್ಪಿಗೆ ನೀಡಬೇಕಲ್ಲ.

(ಸಂ) ಎಂ.ಕೆ. ಮಂಜುನಾಥ್, ಬೆಂಗಳೂರು



ನಿರ್ದೇಶಕ: ಸ್ವಲ್ಪ ಹೆಚ್ಚು ಅಳಬೇಕು ಮತ್ತು ಕಣ್ಣೀರು ಸುರಿಸಬೇಕು.

ನಟಿ: ಸಾಧ್ಯವಿಲ್ಲ ಸಾರ್.

ನಿರ್ದೇಶಕ: ಮನೆ ಮೇಲೆ ಇನ್ ಕಮ್ ಟ್ಯಾಕ್ಸ್ ರೇಡ್ ಆದಹಾಗೆ ನೆನೆಸಿಕೊಳ್ಳಿ.

★★★

ಅಧ್ಯಾಪಕ: ಸೇಲ್ ಟ್ಯಾಕ್ಸ್‌ಗೂ ಇನ್‌ಕಮ್ ಟ್ಯಾಕ್ಸ್‌ಗೂ ವ್ಯತ್ಯಾಸವೇನು?

ವಿದ್ಯಾರ್ಥಿ: ಅಪ್ಪ ಇನ್-ಕಮ್ ಟ್ಯಾಕ್ಸ್ ಕೊಟ್ಟರೆ ಅಮ್ಮ ಸೇಲ್ ಟ್ಯಾಕ್ಸ್ ಕೊಡುತ್ತಾಳೆ.

(ಸಂ) ಡಾ. ಅನಿಕೇತ್ ಶರ್ಮಾ,
ಬೆಂಗಳೂರು